## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂ:**594/2014**

ಸಿ.ಡಬ್ಲ್ಯೂ –7 ಪಿ.ಡಬ್ಲ್ಯೂ -4

| | | |
|---|---|---|
| ಹೆಸರು | : | ಚಂದಪ್ಪ |
| ತಂದೆ:ಗಂಡ | : | ಯಲ್ಲಪ್ಪ ಯಂಕಂಚಿ |
| ವಯಸ್ಸು | : | ೬೨ ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಭುಸನೂರ |

ದಿನಾಂಕ:೧೬.೧೧.೨೦೨೧

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ:**

2014 ನೇ ಇಸವಿಯಲ್ಲಿ ರಾತ್ರಿ 9.30 ಗಂಟೆಗೆ ಚಾಸಾ-1, ನಾನು ಮತ್ತು ಚಾಸಾ-7 ಕೂಡಿಕೊಂಡು ನಮ್ಮ ಹೊಲದಿಂದ ಖಾನಾವಳಿಗೆ ಊಟ ತೆಗೆದುಕೊಂಡು ಹೋಗಲು ಬಂದೆವು. ನಮಗೆ ಊಟ ಕಟ್ಟಿಕೊಡುವಂತೆ ನಾವು ಹೇಳಿದಾಗ ಅವರು ಊಟ ಕಟ್ಟಿಕೊಡುತ್ತೇವೆ ಕುಳಿತುಕೊಳ್ಳಿ ಎಂದು ಹೇಳಿದರು, ನಾವು ಕಟ್ಟೆಯ ಮೇಲೆ ಕುಳಿತುಕೊಂಡೆವು. ಆಗ ಆರೋಪಿಗಳು ಅಲ್ಲಿಗೆ ಬಂದರು. ಆಗ ಅವರು ಊಟಕ್ಕೆ ಕುಳಿತರು. ನಮಗೆ ಊಟ ಕೊಡು ಎಂದು ಹೋಟಲನವರಿಗೆ ಕೇಳಿದರು. ಆಗ ಹೋಟಲನವರು ಒಬ್ಬೊಬ್ಬರಿಗೆ ಕೊಡುತ್ತೇನೆ ಎಂದು ಹೇಳಿದಾಗ, ನಮಗೆ ಊಟ ಮೊದಲು ಕೊಡು ಅವರ ಊಟ ಕಟ್ಟಬೇಡ ಎಂದು ವಾದ ವಿವಾದ ನಡೆಯಿತು. ನಾವು ಮೊದಲು ಬಂದಿದ್ದೇವೆ, ನಾವು ತೆಗೆದುಕೊಂಡು ಹೋಗುತ್ತೇವೆ ಎಂದು ಚಾಸಾ-1 ಹೇಳಿದಾಗ, ಆರೋಪಿಗಳು ಆತನಿಗೆ ಅವಾಚ್ಯ ಶಬ್ದಗಳಿಂದ ಬೈದರು. ಬಯ್ಯಬೇಡ ಎಂದಾಗ 2 ನೇ ಆರೋಪಿ ಚಾಸಾ-1 ರವರಿಗೆ ಹೊಡೆದ. 1 ನೇ ಆರೊಪಿ ಚಾಸಾ-1 ರವರಿಗೆ ರಾಡಿನಿಂದ ಭುಜದ ಮೇಲೆ ಹೊಡೆದ, ಮತ್ತು ಕಾಲಿಗೂ ಹೊಡೆದ, ನಾವು ಜಗಳವನ್ನು ಬಿಡಸಿರುತ್ತೇವೆ. ಚಾಸಾ-1 ಮೂರ್ಛೆ ಹೋಗಿದ್ದ. ನಾವು ಒಂದು ಬಾಡಿಗೆ ಜೀಪಿನಲ್ಲಿ ದೂರು ಕೊಡಲು ನಿಂಬರ್ಗಾಕ್ಕೆ ಹೋದೆವು. ಪೋಲಿಸರು ಚಾಸಾ-1 ರವರನ್ನು ನೋಡಿದರು, ಚಾಸಾ-1 ರವರನ್ನು ಮೊದಲು ಆಸ್ಪತ್ರೆಗೆ ಹೋಗುವಂತೆ ಹೇಳಿದರು. ಅದರಂತೆ ಕಲಬುರಗಿ ಬಸವೇಶ್ವರ ಆಸ್ಪತ್ರೆಗೆ ದಾಖಲಿಸಿದೆವು. ಚಾಸಾ-1 ರವರ ತಂದೆಯವರು ಬಂದರು, ನಂತರ ನಾವು ಮನೆಗೆ ಬಂದೆವು. ಸಾಕ್ಷಿಗೆ ಈಗ ಒಂದು ರಾಡನ್ನು ತೋರಿಸಲಾಗಿ, ಇದೇ ರಾಡಿನಿಂದ ಆರೋಪಿ ಹೊಡೆದಿರುತ್ತಾನೆ ಎಂದು ನುಡಿದಿದ್ದು, ಸದರಿ ರಾಡನ್ನು ಈಗಾಗಲೇ ಮು.ಮಾ.-೧ ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು** ಆರೋಪಿತರ ಪರ ಶ್ರೀ ಎಂ.ಎಸ್.ಹೆಚ್. ರವರಿಂದಃ

( ಈ ಹಂತದಲ್ಲಿ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು )

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂ:**594/2014**

ಸಿ.ಡಬ್ಲ್ಯೂ –6 ಪಿ.ಡಬ್ಲ್ಯೂ -3

| | | |
|---|---|---|
| ಹೆಸರು | : | ಲಕ್ಷ್ಮಣ |
| ತಂದೆ:ಗಂಡ | : | ಸೋಮಣ್ಣ ಚಿಂಚನಸೂರ |
| ವಯಸ್ಸು | : | ೪೭ ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಭುಸನೂರ |

ದಿನಾಂಕ:೧೬.೧೧.೨೦೨೧

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ:**

2014 ನೇ ಇಸವಿಯಲ್ಲಿ ರಾತ್ರಿ 9.30 ಗಂಟೆಗೆ ಚಾಸಾ-1, ನಾನು ಮತ್ತು ಚಾಸಾ-7 ಕೂಡಿಕೊಂಡು ನಮ್ಮ ಹೊಲದಿಂದ ಖಾನಾವಳಿಗೆ ಊಟ ತೆಗೆದುಕೊಂಡು ಹೋಗಲು ಬಂದೆವು. ನಮಗೆ ಊಟ ಕಟ್ಟಿಕೊಡುವಂತೆ ನಾವು ಹೇಳಿದಾಗ ಅವರು ಊಟ ಕಟ್ಟಿಕೊಡುತ್ತೇವೆ ಕುಳಿತುಕೊಳ್ಳಿ ಎಂದು ಹೇಳಿದರು, ನಾವು ಕಟ್ಟೆಯ ಮೇಲೆ ಕುಳಿತುಕೊಂಡೆವು. ಆಗ ಆರೋಪಿಗಳು ಅಲ್ಲಿಗೆ ಬಂದರು. ಆಗ ಅವರು ಹೊಟೇಲನವರಿಗೆ ನಮಗೆ ಊಟ ಮೊದಲು ಕೊಡು ಅವರ ಊಟ ಕಟ್ಟಬೇಡ ಎಂದು ವಾದ ವಿವಾದ ನಡೆಯಿತು. ಬೋಸಡಿ ಮಗನೇ 2-3 ತಿಂಗಳಿಂದ ನಿನಗೆ ಹುಡುಕಾಡುತ್ತಿದ್ದೆವು ಇವತ್ತು ಸಿಕ್ಕಿರುವೆ ಎಂದು ಆರೋಪಿಗಳು ಚಾಸಾ-1 ರವರಿಗೆ ಬೈದರು. ಆಗ 2 ನೇ ಆರೋಪಿ ಚಾಸಾ-1 ರವರಿಗೆ ಹೊಟ್ಟೆಯ ಮೇಲೆ ಮತ್ತು ಬೆನ್ನ ಮೇಲೆ ಕೈಯಿಂದ ಹೊಡೆದನು. 2 ನೇ ಆರೋಪಿ ಚಾಸಾ-1 ರವರಿಗೆ ತನ್ನ ಕೈಯಲ್ಲಿರುವ ರಾಡಿನಿಂದ ತಲೆಯ ಮೇಲೆ ಹೊಡೆಯಲು ಹೋದಾಗ ಚಾಸಾ-1 ತಪ್ಪಿಸಿಕೊಳ್ಳಲು ಯತ್ನಿಸಿದಾಗ ಚಾಸಾ-1 ರವರ ಭುಜದ ಮೇಲೆ ರಾಡಿನಿಂದ ಗಾಯವಾಯಿತು. ಚಾಸಾ-1 ತಪ್ಪಿಸಿಕೊಂಡು ಓಡಿ ಹೋಗಲು ಪ್ರಯತ್ನಿಸಿದಾಗ ಆತನಿಗೆ ರಾಡಿನಿಂದ ಕಾಲ ಮೇಲೆ ಹೊಡೆದರು. ಆಗ ಆತ ಮೂರ್ಛೆ ಹೋದ. ಆರೋಪಿಗಳೆಲ್ಲರೂ ಓಡಿ ಹೋದರು. ಚಾಸಾ-1, ನಾನು ಮತ್ತು ಚಾಸಾ-7 ನಿಂಬರ್ಗಾ ಠಾಣೆಗೆ ಹೋದೆವು, ಪೋಲಿಸರು ನಮಗೆ ಆಸ್ಪತ್ರೆಗೆ ಹೋಗಲು ತಿಳಿಸಿದರು, ಆಸ್ಪತ್ರೆಯಲ್ಲಿ ಎಂ.ಎಲ್.ಸಿ. ಬರೆಯುವುದಾಗಿ ಹೇಳಿ ಕಳಿಸಿದರು. ಬಸವೇಶ್ವರ ಆಸ್ಪತ್ರೆಗೆ ಹೋಗಿ ದಾಖಲಾದ ನಂತರ ನಿಂಬರ್ಗಾ ಠಾಣೆಯ ಪೋಲಿಸರು ಬಂದು ದೂರನ್ನು ಪಡೆದರು. ನಾನು ಬೆಳಿಗ್ಗೆ 9.00 ಗಂಟೆಗೆ ಊರಿಗೆ ಬಂದೆ. ಸಾಕ್ಷಿಗೆ ಈಗ ಒಂದು ರಾಡನ್ನು ತೋರಿಸಲಾಗಿ, ಇದೇ ರಾಡಿನಿಂದ ಆರೋಪಿ ಹೊಡೆದಿರುತ್ತಾನೆ ಎಂದು ನುಡಿದಿದ್ದು, ಸದರಿ ರಾಡನ್ನು ಈಗಾಗಲೇ ಮು.ಮಾ.-೧ ಎಂದು ಗುರುತಿಸಲಾಗಿದೆ.

<u>**ಪಾಟೀ ಸವಾಲು** ಆರೋಪಿತರ ಪರ ಶ್ರೀ ಎಂ.ಎಸ್.ಹೆಚ್. ರವರಿಂದಃ</u>

**( ಈ ಹಂತದಲ್ಲಿ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು )**

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.